43.	ಕೆ.ಎಂ. ಕೊಟ್ರಯ್ಯ	ಶಿರಗುಪ್ಪ ಪಟ್ಟಣದ ಬ್ಲಾಕ್ ನಂ. 4 ಚೆನ್ನಮ್ಮನಹಳ್ಳಿ ಕೊಳಚೆ ಪ್ರದೇಶ ಬ್ಲಾಕ್-2	50
44.	ವಿ. ರಾಜೇಂದ್ರ	- ಡಿಟೋ - ಬ್ಲಾಕ್-1	50
45.	ಬಿ.ಆರ್. ಪಾಟೀಲ್	ನಿಪ್ಪಾಣಿ ನಗರದ ನೆಲಗೆಜಾಳ ಕೊಳಚೆ ಪ್ರದೇಶ	30
46.	ವಿ. ಮುತ್ಯಾಲು	ಬಸವನ ಬಗೇವಾಡಿ, ಬಸವನಗರ	25

ವಿಶೇಷ ಘಟಕ ಯೋಜನೆ ಅಡಿ ಬಿಡುಗಡೆಯಾದ ಹಣದ ಬಗ್ಗೆ

85 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಅಡಿ ನಿಗದಿಗೊಳಿಸಿದ ಒಟ್ಟು ಹಣವೆಷ್ಟು; ಇದರಲ್ಲಿ ಖರ್ಚಾದ ಹಣ ಹಾಗೂ ಬಾಕಿ ಉಳಿದ ಹಣವೆಷ್ಟು?

ಆ) ಹಣ ಖರ್ಚಾಗದೆ ಉಳಿಯಲು ಕಾರಣವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳಿಗೆ ನಿಗದಿಗೊಳಿಸಿದ ಒಟ್ಟು ಹಣ ವಿಶೇಷ ಕೇಂದ್ರೀಯ ಸಹಾಯಧನ ಸೇರಿ ರೂ. 293.52 ಕೋಟಿಗಳು.

ಇದರಲ್ಲಿ ಖರ್ಚಾದ ಹಣ ರೂ. 271.76 ಕೋಟಿಗಳು ಮತ್ತು ಬಾಕಿ ಉಳಿದ ಹಣ ರೂ. 21.75 ಕೋಟಿಗಳು.

ಆ) 1993-94ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹೊಸ ಯೋಜನೆಗಳಿಗೆ ಅಂಗೀಕಾರ ಸಕಾಲದಲ್ಲಿ ದೊರೆಯುದೇ ಇದ್ದ ಕಾರಣ ಹಣ ಬಾಕಿ ಉಳಿದಿದೆ.

ಪ್ರಕೃತಿ ವಿಕೋಪದಿಂದಾಗಿರುವ ಹಾನಿ

89 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)

1990-91, 1991-92,1992-93, 1993-94ನೇ ಸಾಲುಗಳಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ನಷ್ಟವೆಷ್ಟು?

ಆ) ಈ ಸಾಲುಗಳಲ್ಲಿ ಕೇಂದ್ರದ ನೆರವನ್ನು ಕೋರಿ ರಾಜ್ಯ ಸರ್ಕಾರದವರು ಮನವಿಗಳನ್ನೇನಾದರೂ ಸಲ್ಲಿಸಿರುವರೆ?

ಇ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಸದರಿ ಸಾಲುಗಳಲ್ಲಿ ಬಂದ ಪರಿಹಾರ ಎಷ್ಟು? ಮತ್ತು ಯಾವ ರೂಪದಲ್ಲಿ ವರ್ಷವಾರು ವಿವರಗಳನ್ನು ಒದಗಿಸುವುದು)

ಶ್ರೀ ಧರಮ್‌ಸಿಂಗ್ (ಕಂದಾಯ ಸಚಿವರು) :

ಅ) ಈ ಸಾಲುಗಳಲ್ಲಿ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಉಂಟಾದ ನಷ್ಟ ಕೆಳಕಂಡಂತೆ ಇದೆ: